# ಸಿರಿ ವೈಖರಿ



**ಸಂಗೀತ,** ನಿರೂಪಣೆ, ರೇಡಿಯೊ, ನಾಟಕ... ಕಲೆಯ ಹಲವು ಕವಲುಗಳ ಅನುಭವಗಳನ್ನು ಜೊತೆಗಿಟ್ಟುಕೊಂಡು ನಟನಾ ಕ್ಷೇತ್ರಕ್ಕೆ ಕಾಲಿಟ್ಟವರು ಸಿರಿ ರವಿಕುಮಾರ್. ಈಚೆಗೆ 'ಬ್ಯಾಚುಲರ್ ಪಾರ್ಟಿ', 'ಸ್ವಾತಿಮುತ್ತಿನ ಮಳೆಹನಿಯೇ' ಸಿನಿಮಾದಲ್ಲಿ ಕಾಣಿಸಿಕೊಂಡಿದ್ದ ಅವರು, ಪ್ರಯೋಗಾತ್ಮಕ ಪಾತ್ರಗಳ ಜೊತೆಗೆ ರಿಯಲಿಸ್ಟಿಕ್ ಕಥೆಗಳನ್ನು ಆದ್ಯತೆಯಾಗಿಟ್ಟುಕೊಂಡವರು.

ಸದ್ಯ 'ಬಿಸಿ ಬಿಸಿ Ice cream' ಎಂಬ ಸಿನಿಮಾದಲ್ಲಿ ನಟಿಸಿರುವ ಅವರು, ತಮ್ಮ ಸಿನಿಮಾ ಜೀವನದ ಬಗ್ಗೆ ಈಚೆಗೆ ಸಂದರ್ಶನವೊಂದರಲ್ಲಿ ಮಾತು ಹಂಚಿಕೊಂಡಿದ್ದಾರೆ.

ರಂಗಭೂಮಿ ಹಿನ್ನೆಲೆಯಿಂದ ಬಂದಿರುವ ತಮಗೆ ಪ್ರಯೋಗಾತ್ಮಕ ಪಾತ್ರಗಳು ಎಂದಿಗೂ ಖುಷಿಕೊಡುವಂಥವು ಎಂದಿದ್ದಾರೆ. ಮಾತ್ರವಲ್ಲ, ತಮಗೆ ಇದುವರೆಗೆ ದೊರೆತಿರುವ ಪಾತ್ರಗಳೂ ತೃಪ್ತಿ ತಂದಿವೆ ಎಂದು ಹೇಳಿದ್ದಾರೆ.

'ಸ್ವಾತಿಮುತ್ತಿನ ಮಳೆಹನಿಯೇ' ಸಿನಿಮಾ ಕುರಿತು ಮಾತನಾಡಿರುವ ಅವರು, 'ಈ ಸಿನಿಮಾವನ್ನು ಒಟಿಟಿ ರಿಲೀಸ್‌ಗೆಂದು ಮಾಡಿದ್ದಾಗಿತ್ತು. ಥಿಯೇಟರ್‌ನಲ್ಲಿ ಬಿಡುಗಡೆ ಆಗುತ್ತೆ ಎಂಬ ಆಲೋಚನೆಯೂ ಇರಲಿಲ್ಲ. ಆದರೆ ಒಟಿಟಿಗೆ ಬಂದ ನಂತರವೇ ಸಿನಿಮಾಗೆ, ನನ್ನ ಪಾತ್ರಕ್ಕೆ ಫೀಡ್‌ಬ್ಯಾಕ್ ಹೆಚ್ಚು ಬಂದಿದ್ದು' ಎಂದಿದ್ದಾರೆ.

ಸಿನಿಮಾ ಹೊರತಾಗಿ, ಎಂಟು ಗಂಟೆ ಅವಧಿಯ ಇಂಗ್ಲಿಷ್ ನಾಟಕ 'ಪರ್ವ'ದಲ್ಲಿ ದ್ರೌಪದಿ ಪಾತ್ರವನ್ನು ನಿರ್ವಹಿಸಿದ್ದಾರೆ ಸಿರಿ. ತಮ್ಮ ಹಾಗೂ ರಂಗಭೂಮಿ ನಂಟಿನ ಬಗ್ಗೆ ಸಂತಸದಿಂದ ಮಾತನಾಡಿದ್ದಾರೆ ಅವರು.

'ರಂಗಭೂಮಿಯಲ್ಲಿ ಕಲಿತ ಕೆಲಸ ಎಂದಿಗೂ ಫಲ ನೀಡುವಂಥದ್ದು, ರಂಗಭೂಮಿಯೊಂದಿಗೆ ನನ್ನ ನಂಟು ಮುಂದುವರೆಯುತ್ತಲೇ ಇರುತ್ತದೆ. ಸಿನಿಮಾ ಕಥೆ, ಸ್ಕ್ರಿಪ್ಟ್ ಆಯ್ಕೆ, ಪಾತ್ರದ ಮಹತ್ವ... ಹೀಗೆ ಸಿನಿಮಾದ ಪ್ರತಿ ಸಂಗತಿಯನ್ನು ನಿರ್ಧರಿಸುವಲ್ಲಿ ರಂಗಭೂಮಿಯ ಅನುಭವ ಸಹಾಯಕ್ಕೆ ಬರುತ್ತದೆ. ನಾಟಕದಲ್ಲಿ ಪಾತ್ರದ ಬಗ್ಗೆ ತಿಳಿದುಕೊಂಡು ಯಾವುದು ನಮಗೆ ಹೊಂದುತ್ತದೆ ಎಂಬುದನ್ನು ಆರಿಸಿಕೊಳ್ಳಬಹುದು. ಸಿನಿಮಾದಲ್ಲಿ ಒಂದು ಪಾತ್ರವನ್ನು ಒಪ್ಪಲು ಸಾಕಷ್ಟು ಕಾರಣಗಳು ಇರುತ್ತವೆ. ಇದು ಪಾತ್ರದ ವಿಷಯವೊಂದೇ ಆಗಿರುವುದಿಲ್ಲ. ಸಿನಿಮಾದ ಹಣಕಾಸಿನ ವಿಷಯವೂ ಇದರಲ್ಲಿರುತ್ತದೆ' ಎಂದು ಸಿನಿಮಾ ಹಾಗೂ ರಂಗಭೂಮಿಯ ನಡುವಿನ ತೆಳುಗೆರೆಯನ್ನು ಬಿಡಿಸಿಡುತ್ತಾರೆ.

ನಟನೆ ಹೊರತಾಗಿ ಕಾರ್ಯಕ್ರಮ ನಿರೂಪಣೆ, ಪಾಡ್‌ಕಾಸ್ಟ್ ಮಾಡುವುದು ತಮ್ಮಿಷ್ಟದ ಕೆಲಸ ಎಂದಿದ್ದಾರೆ ಸಿರಿ. ಬಿಡುವಿನ ವೇಳೆಯಲ್ಲಿ ಸಿನಿಮಾಗಳನ್ನು ನೋಡುತ್ತಾ ನಟನಾ ಕೌಶಲ ವೃದ್ಧಿಸಿಕೊಳ್ಳುವುದು, ನೃತ್ಯ ಕಲಿಯುವುದು, ಒಟ್ಟಾರೆ ತಮ್ಮನ್ನು ತಾವು ಎಂಗೇಜ್ ಆಗಿಟ್ಟುಕೊಳ್ಳುವುದಾಗಿ ತಿಳಿಸಿದ್ದಾರೆ.